IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
Research Paper © 2012 IJFANS. All Rights Reserved UGC CARE Listed ( Group -I) Journal Volume 11, Iss 05, 2022

# ಬಸವಣ್ಣನವರ ವಚನಗಳಲ್ಲಿ ದಲಿತ ಪ್ರಜ್ಞೆ

Dr Vijayanand A wagge, Associate professor in Kannada, HRSM college Gangavathi
Saraswati giri, anegundi Road, Gangavathi, Koppal Dist.

'ದಲಿತ'ವೆಂಬ ಪದಕ್ಕೆ ಸಾಹಿತ್ಯ ಮತ್ತು ಸಾಮಾಜಿಕ ವಲಯಗಳಲ್ಲಿ ಬಹು ಚರ್ಚಿತವಾಗಿದೆ. ದಲಿತರ್‍ಯಾರು? ಅನ್ನುವುದಕ್ಕೆ ವಿದ್ವಾಂಸರ ಪ್ರಕಾರ ಅಸ್ಪೃಶ್ಯರು ಮಾತ್ರವೆಂಬುದು. ಇನ್ನು ಕೆಲವರ ಪ್ರಕಾರ ತುಳಿತಕ್ಕೊಳಗಾದ ಕಾರ್ಮಿಕರು, ಶ್ರಮಜೀವಿಗಳು, ಕೃಷಿ ಕಾರ್ಮಿಕರು, ಅಲೆಮಾರಿಗಳು, ಆದಿವಾಸಿಗಳು ಮತ್ತು ಮಹಿಳೆಯರೆಂದು. ನಿಘಂಟುವಿನಲ್ಲಿ ಶೋಷಿತರು ಎಂದರೆ ದಳ, ಗುಂಪು, ಸೈನ್ಯ, ಶೋಷಿತ, ಹಿಂದುಳಿದವನು, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಕೆಳಮಟ್ಟದವರು, ದಮನಕ್ಕೊಳಗಾದವರು ಹೀಗೆ ಅರ್ಥಗಳಿವೆ. ಮಹಾತ್ಮ ಡಾ.ಅಂಬೇಡ್ಕರ್ ಅವರು ಕೂಡ ದಲಿತವೆಂಬ ಪದಕ್ಕೆ 'ಡಿಪ್ರೆಸ್ಡ್' ಎಂಬ ಪದವನ್ನು ಈ ಅರ್ಥದಲ್ಲಿಯೇ ಬಳಸಿದ್ದಾರೆ.

ಈ ದೇಶದ ಸಮಾಜ ವ್ಯವಸ್ಥೆಯಲ್ಲಿ ದಲಿತರು, ಮಹಿಳೆಯರು ನಿರಂತವಾಗಿ ಶೋಷಣೆಗೊಳಗಾಗುತ್ತ ಬಂದಿದ್ದಾರೆ. ಈ ವರ್ಗಗಳು ಶತಶತಮಾನಗಳಿಂದಲೂ ನಿರಂತವಾಗಿ ಶೋಷಣೆಗೆ ಒಳಗಾಗಿದ್ದಾರೆ. ಇಂದಿಗೂ ಒಳಗಾಗುತ್ತಿದ್ದಾರೆ. ಅಸ್ಪೃಶ್ಯರ ಮೇಲೆ ನಡೆಯುವ ಶೋಷಣೆಗೆ ಮೂಲ ಬೀಜ ವೈದಿಕ ಧರ್ಮದ ಕರ್ಮಠ, ಅದರಲ್ಲಿರುವ ಗೊಡ್ಡು ನಂಬಿಕೆಯ ಸಂಪ್ರದಾಯದ ಬಗ್ಗೆ ನಿತ್ಯ ಹೋರಾಡಬೇಕಾಗಿದೆ. ಹನ್ನೆರಡನೆ ಶತಮಾನದ ಶಿವಶರಣರಿಗೆ ವೈದಿಕ ಧರ್ಮದ ಕಂದಾಚಾರಗಳೇ ಕಂಟಕವಾಗಿ ನಿಂತಿದ್ದು ವಿಪರ್ಯಾಸ. ಸಾಮಾಜಿಕ-ಸಾಂಸ್ಕೃತಿಕ ಶೋಷಣೆಯನ್ನು ನಿಲ್ಲಿಸಿ ಸಮಾನತೆಯನ್ನು ತರಲು ವೈಧಿಕ ಧರ್ಮದ ವರ್ಣಾಶ್ರಮ ಪದ್ಧತಿಯ ವಿರುದ್ಧ ಅಸ್ಪೃಶ್ಯರ ಬದುಕಿಗಾಗಿ ನಡೆಸಿದ ಹೋರಾಟವಾಗಿದೆ.

ಶತಶತಮಾನಗಳಿಂದ ಈ ದೇಶದಲ್ಲಿ ನೀರಿನಂತೆ ಹರಿದುಕೊಂಡು ಬಂದಿರುವ ಜಾತಿ ವ್ಯವಸ್ಥೆ ದಲಿತರ ಬದುಕನ್ನು ನುಂಗಿ ನೀರು ಕುಡಿದು ಬಿಟ್ಟಿದೆ. ಜಾತಿ ಪದ್ಧತಿ ಹೇಗೆ ಹುಟ್ಟಿತು? ಅದರ ತಂದೆ-ತಾಯಿಯಾರು? ಅದರ ಮೂಲವೆಲ್ಲಿ ವೆಂಬಂತ ಹಲವಾರು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಈ ಪ್ರಶ್ನೆಗಳನ್ನಿಟ್ಟುಕೊಂಡು ಶಿವಶರಣರು ವಸ್ತು ನಿಷ್ಠವಾಗಿ ಸತ್ಯ ಶೋಧಿಸಿ ಸತ್ಯದ ದರ್ಶನ ಮಾಡಿಸಿದ್ದು ಇತಿಹಾಸದಲ್ಲಿ ಮರೆಯಲಾಗದ ಅವಿಸ್ಮರಣೀಯವಾದ ಸತ್ಯ ಸಂಗತಿ. ಕ್ರಿ.ಪೂ. ೬ನೇ ಶತಮಾನದಲ್ಲಿ ಮಹಾಮಾನವತಾವಾದಿ, ಬೋಧಿಸತ್ವ, ಕರಣಾಮಯಿ, ಸತ್ಯಶೀಲ ಗೌತಮ ಬುದ್ಧ ವರ್ಣಾಶ್ರಮ ಪದ್ಧತಿಯನ್ನು ತಿರಸ್ಕರಿಸಿ ವೇದ, ಉಪನಿಷತ್ತು ಆಗಮವನ್ನು ದೂರ ತಳ್ಳಿ ಸತ್ಯದ ದರ್ಶನ ಮಾಡಿಸಿದ್ದು ಮತ್ತು ಅಸ್ಪೃಶ್ಯರಿಗೂ ಕೂಡ ಸಮಾನವಾದ ಅವಕಾಶ ಕಲ್ಪಿಸಿಕೊಟ್ಟ ಮಹಾಮಾತ್ಮ, ವೈದಿಕಶಾಹಿ ವರ್ಣಾಶ್ರಮ ಪದ್ಧತಿಯ ಹಿನ್ನೆಲೆಯಿಂದ ಬಂದ 'ಮನು', 'ಜಾತಿ ಬೀಜ'ವನ್ನು ಬಿತ್ತಿ ದಲಿತರು ಪಾದದಿಂದ ಹುಟ್ಟಿದವರೆಂದು, ಬ್ರಾಹ್ಮಣರು ತಲೆಯಿಂದ ಹುಟ್ಟಿದವರು, ಕ್ಷತ್ರಿಯರು ಭುಜದಿಂದ, ಶೂದ್ರರು ಬೊಂಕದಿಂದ ಹುಟ್ಟಿದವರೆಂದು ಕಪೋಲ ಕಲ್ಪಿತ ವಿಚಾರಗಳು ಕಟ್ಟಿ ದಲಿತರ ಬದುಕನ್ನು ನಾಯಿ-ಹಂದಿಗಳಿಗಿಂತಲೂ ಕಡೆಯಾಗಿ ನಡೆಸಿಕೊಂಡು ಬಂದದ್ದು ಅವನ ನೀಚ ಬುದ್ಧಿಗೆ ಸಾಕ್ಷಿಯಾಗಿದೆ. ಇಪ್ಪತ್ತೊಂದನೆ ಶತಮಾನದಲ್ಲಿ ಮಹಾತ್ಮ ಡಾ.ಅಂಬೇಡ್ಕರ್ ವರ್ಣಾಶ್ರಮ ಧರ್ಮದ ವಿರುದ್ಧ ಹೋರಾಡಿ ವೇದ, ಉಪನಿಷತ್ತು, ಆಗಮನಗಳನ್ನು ತಿರಸ್ಕರಿಸಿ ದಲಿತರಿಗೆ ಸ್ವತಂತ್ರವಾದ ಬದುಕನ್ನು ಕಟ್ಟಿಕೊಡುವಲ್ಲಿ ಅವರು ತಮ್ಮ ಜೀವನ ತುಂಬಾ ಹೋರಾಟ ಮಾಡಿದರು. ಆದರೆ ವಾಸ್ತವದಲ್ಲಿ ಇಂದಿನ ದಲಿತರು ಅಂಬೇಡ್ಕರ್ ಅನುಯಾಯಿಯಾಗಿ ಏನನ್ನು ಮಾಡುತ್ತಿದ್ದಾರೆ?.

ಬಸವಣ್ಣನಂತ ಮಹಾನ್ ಮಾನವತಾವಾದಿ, ಮಹಾನ್ ದಾರ್ಶನಿಕ, ಭಕ್ತ, ಸಮಾಜ ಸುಧಾರಕ, ಅಸ್ಪೃಶ್ಯರ ಬದುಕಿನ ಸಮಾನತೆಗಾಗಿ ಹೋರಾಡಿದ. "ಹೊಲೆಯ ಹೊಲಬಿಗನಾದಡೆ ಅವರ ಹೊರೆಯಲಿಪ್ಪುದು ಲೇಸ ಕಂಡಯ್ಯಾ" ವೆಂಬಲ್ಲಿ ಅವರ ಆತ್ಮೀಯ ಸಂಬಂಧದ ಬೆಸುಗೆ ಬೆರೆತಿದೆ.

"ಅಪ್ಪನು ನಮ್ಮ ಮಾದಾರ ಚೆನ್ನಯ್ಯ
ಬೊಪ್ಪನು ನಮ್ಮ ಡೋಹರ ಕಕ್ಕಯ್ಯ
ಚಿಕ್ಕಯ್ಯ ನೆಮ್ಮಯ್ಯ ಕಾಣಯ್ಯ
ಅಣ್ಣನು ನಮ್ಮ ಕಿನ್ನರ ಬೊಮ್ಮಯ್ಯ".

ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದ ವರ್ಣಾಶ್ರಮ ಪದ್ಧತಿಯ ವಿರುದ್ಧ ಪಾಂಚ್ಯಜನ್ಯ ಮೊಳಗಿಸಿದ್ದು ಬಸವಣ್ಣ. ಬದುಕಿನಲ್ಲಿ ಆತ್ಮವಿಶ್ವಾಸವನ್ನೇ ಕಳೆದುಕೊಂಡು ಬದುಕುತ್ತಿದ್ದ ದಲಿತ ವರ್ಗಕ್ಕೆ ಜೀವ

ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 11, Iss 05, 2022

ಹುಟ್ಟಿದವರೆಂತ ಅಪ್ಪ,ಅಣ್ಣನೆಂದು ಪರಿಭಾವಿಸುವ ಪರ ಅಲ್ಲದ ಅವರಲ್ಲಿಯೇ ಕೂಡಲ ಸಂಗಯ್ಯನನ್ನು ಕಾಣುವಂತದ್ದು ಸರ್ವಧರ್ಮ ಸಮನ್ವತೆಗೆ ಹಿಡಿದ ಕನ್ನಡಿಯಾಗಿದೆ. ಹೆತ್ತವರನ್ನೇ ಕಡೆಗಾಣಿಸುವಂತ ಪರಿಸ್ಥಿತಿಯಲ್ಲಿ ಬಸವಣ್ಣನವರು ಸಮಾಜವನ್ನು ತಿದ್ದುವದರ ಮೂಲಕ ಸಮಾಜಕ್ಕೆ ಕಂಟಕವಾಗಿರುವ ಜಾತಿ ಪದ್ಧತಿಯನ್ನು ಹೋಗಲಾಡಿಸಲು ತಮ್ಮನ್ನೆ ತಾವು ತೊಡಗಿಸಿಕೊಂಡಿದ್ದು ಆಶ್ಚರ್ಯ.

"ಹೊಲೆಯೊಳಗೆ ಹುಟ್ಟಿ ಕುಲವನರಸುವೆ,
ಎಲವೊ ಮಾತಂಗಿಯ ಮಗನೀನು
ಸತ್ತದನೆಳೆವೆತ್ತಣ ಹೊಲೆಯೆ?"
"ವ್ಯಾಸ ಬೊಯಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ
ಮಂಡೋದರಿ ಕಪ್ಪೆಯ ಮಗಳು
ಕುಲವನರಸದಿರಿಂಬೋ ಕುಲದಿಂದ ಮನ್ನೇನಾದಿರಿಂ ಬೋ?
ಸಾಕ್ಷತ್ ಅಗಸ್ತ್ಯ, ಕಚ್ಚಿಲ, ದುರ್ವಾಸ ಮುಚ್ಚಿಗ, ಕಶ್ಯಪ ಕಮ್ಮಾರ,
ಕೌಂಡಿನ್ಯನೆಂಬ ಋಷಿ ಮೂರು ಭುವನರಿಯೆ ನಾವಿದ ಕಾಣಿಬೋ!.

ವರ್ಣಾಶ್ರಮ ಧರ್ಮ ರೂಢಿ, ಸಂಪ್ರದಾಯದ ಮೂಲಕ ಉತ್ತಮ ಕುಲದಲ್ಲಿ ಹುಟ್ಟಿದವರು ಮಾತ್ರ ಉತ್ತಮ ಕಾರ್ಯ ಮಾಡಲು ಮತ್ತು ದೊಡ್ಡ ಸಾಧಕನಾಗಲು ಸಾಧ್ಯವೆಂಬ ಸ್ಥಾಪಿತ ವಿಚಾರಗಳನ್ನು ದೂರ ತಳ್ಳಿ ಕುಲದ ಮೂಲಕ ನಡೆಯುವ ಶೋಷಣೆಯನ್ನು ತಡೆಯಲು ನಡೆಸಿದ ಪ್ರಯತ್ನ ಅದ್ಭುತ. ಕುಲ ಕುಲವೆಂದು ಹೊಡೆದಾಡುವಿರಿ ಕುಲದ ನೆಲ ಬಲ್ಲಿರಾ ಎನ್ನುವ ಮೂಲಕ ಪ್ರಶ್ನಿಸಿ ಸತ್ತುದನೆಳೆವನೆತ್ತಣ ಹೊಲೆಯ? ಎಂದು ಪ್ರಶ್ನಿಸುತ್ತಾರೆ. ಹೊತ್ತು ತಂದು ನೀವು ಕೊಲ್ಲುವಿರಿ ಎಂದು ವಿಡಂಬಿಸುತ್ತಾರೆ. ಎಲ್ಲರೂ ಹುಟ್ಟುವ ಮೂಲ ಒಂದೆಯಾಗಿರುವಾಗ ಕುಲವನರಸುವ ಪ್ರಕ್ರಿಯೆ ವಿಪರ್ಯಾಸದಿಂದ ಕೂಡಿದೆಂದು ಅಭಿವ್ಯಕ್ತಪಡಿಸುತ್ತಾರೆ. ವ್ಯಾಸ, ಮಾರ್ಕಂಡೇಯ ಮಂಡೋದರಿಯ ಜನ್ಮವೃತ್ತಾಂತ ಚಿತ್ತರಿಸುವ ಮೂಲಕ ಅಗಸ್ತ್ಯ, ದುರ್ವಾಸ, ಮುಚ್ಚಿಗ ಕಶ್ಯಪ ಕಮ್ಮಾರ, ಕೌಂಡಿನ್ಯ ಅವರ ಹುಟ್ಟಿನ ಮೂಲವನ್ನು ತಿಳಿಸುತ್ತ ಕುಲಕ್ಕೂ-ಸಾಧನೆಗಳು ಏಕೆ ಸಂಬಂಧಗಳನ್ನು ಕಲ್ಪಿಸುವುದೆಂದು ಪ್ರಶ್ನೆ ಮಾಡುತ್ತಾರೆ. ? ವೃತಿಗಳನ್ನೆ ಜಾತಿಗಳಾಗಿ ವಿಂಗಡಿಸುವಂತದ್ದು ಖಂಡನೀಯವೆಂದು ಬಸವಣ್ಣವರು ಹೇಳುವಂತದ್ದು ಇಲ್ಲಿ ಗಮನಿಸಬೇಕು. ಈ ಹಿನ್ನೆಲೆಯಲ್ಲಿ ದಲಿತ ಕವಿ ಸಿದ್ಧಲಿಂಗಯ್ಯನವರ ವಿಚಾರ ಹಿಗಿದೆ. "ದಲಿತರಾದವರನ್ನು ಸಂಘಟನೆ ಮಾಡಿ ಬಸವಣ್ಣ ಅವರನ್ನು ಪಟ್ಟಭದ್ರರ ವಿರುದ್ಧ ಹೋರಾಟಕ್ಕೆ ಸಿದ್ಧಗೊಳಿಸಿದ. ಇಲ್ಲಿ ಭಾಗವಹಿಸಿದ ಜನ, ಅವರು ಪ್ರತಿಷ್ಠಾಪನೆ ಮಾಡಿದ ಮೌಲ್ಯಗಳು, ಅವರು ಶತ್ರುಗಳೆಂದು! ಪರಿಗಣಿಸಿದ ವ್ಯಕ್ತಿಗಳನ್ನು ಗಮನಿಸಿದರೆ ವಚನ ಚಳುವಳಿ ಮೊದಲ ದಲಿತ ಚಳುವಳಿ ಎಂಬ ಅರಿವಾಗುತ್ತದೆ. ದಲಿತರು ಕನ್ನಡ ನಾಡಿನ ಚರಿತ್ರೆಯಲ್ಲಿ ಮೊದಲು ಸೊಲ್ಲು ಎತ್ತಿದ್ದು ಆಗಲೇ. (ಡಾ.ಸಿದ್ಧಲಿಂಗಯ್ಯ, ಬಸವೇಶ್ವರ ಮತ್ತು ಪುರಂದರದಾಸರು, ಬಸವರಾಜ ಸಬರದ. ಪು.ಸಂ.೧೩೩).

ಸಮಾಜೋಧಾರಕನಾದ ಬಸವಣ್ಣ ಏಡ್ಸ್ ರೋಗಕ್ಕಿಂತಲೂ ಭಯಾನಕವಾಗಿ ಹರಡಿರುವ ಜಾತಿ ವ್ಯವಸ್ಥೆಯನ್ನು ಹಂತ ಹಂತವಾಗಿ ನಿರ್ಮೂಲನೆ ಮಾಡಲು ಮತ್ತು ದಲಿತರು ಮತ್ತು ದಲಿತೇತರಲ್ಲಿ ಪರಸ್ಪರ ಸಹಬಾಳ್ವೆಯನ್ನುಂಟು ಮಾಡಲು ಮಾದಾರ ಹರಳಯ್ಯನ ಮಗನಾದ 'ಶೀಲವಂತನಿಗೂ' ಬ್ರಾಹ್ಮಣ ಮದುರಸನ ಮಗಳಾದ 'ಲಾವಣ್ಯವ'ತಿಗೂ ಮದುವೆ ಮಾಡಿಸಿದರು. ಆದರೆ ಮುಂದೆ ನಡದದ್ದೆ ಬಸವಣ್ಣವರ ತಲೆದಂಡ.

"ಭಕ್ತಿಯಿಲ್ಲದ ಬಡವನಾನಯ್ಯ
ಕಕ್ಕಯ್ಯನ ಮನೆಯಲು ಬೇಡಿದೆ
ಚನ್ನಯ್ಯನ ಮನೆಯಲು ಬೇಡಿದೆ
ದಾಸಯ್ಯನ ಮನೆಯಲು ಬೇಡಿದೆ
ಎಲ್ಲಾ ಪುರಾತನರು ನೆರೆದು ಭಕ್ತಿ ಚಿಕ್ಷವನಿಕ್ಕಿದಡೆ,
ಎನ್ನ ಪಾತ್ರೆ ತುಂಬಿತ್ತು ಕೂಡಲ ಸಂಗಮದೇವಾ?

'ಭಕ್ತಿ' ಬಂಡಾರಿಯಾದ ಬಸವಣ್ಣ ಭಕ್ತಿಯಿಲ್ಲದ ಬಡವನಾನ್ಯಯನೆಂದು ಹೇಳುವುದು ಅವರ ದೊಡ್ಡ ಗುಣ ಮತ್ತು ವ್ಯಕ್ತಿತ್ವ. ದಲಿತ ಶಿವಶರಣರಾದ ಕಕ್ಕಯ್ಯ ಚನ್ನಯ್ಯ, ದಾಸಯ್ಯನಲ್ಲಿಯೂ ಭಕ್ತಿ' ಬೇಡುವುದು ಅವರ ಸಮನ್ವಯತೆಯ ದೃಷ್ಟಿಕೋನ ಎದ್ದು ಕಾಣುತ್ತದೆ. ಜೊತೆಗೆ ನಿಜವಾದ ಭಕ್ತರು ನಿಜವಾದ ಪುರಾತನರು ದಲಿತರೆಂಬುದನ್ನು ಪ್ರಸ್ತುತ ಪಡಿಸುತ್ತ ಜಾತಿ ವ್ಯವಸ್ಥೆಯ ಮೂಲಕ ಹುಟ್ಟಿಕೊಂಡಿರುವ ಮೇಲು-ಕೀಳುಗಳನ್ನು ಕಿತ್ತೆಸೆದಿದ್ದಾರೆ. ನಿಜವಾದ ಕುಲಜರೆಂದರೆ ದಲಿತರು ನನ್ನ ಭಕ್ತಿಯ ಮೂಲಕ್ಕೆ ಅವರೇ ಶಕ್ತಿವೆಂದು ಅಭಿವ್ಯಕ್ತಿಸುವ ಮೂಲಕ ತಮ್ಮನ್ನು ಗುರುತಿಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ ಮಹಾತ್ಮ ಬಸವಣ್ಣ.

ಹುಟ್ಟು ಬ್ರಾಹ್ಮಣನಾದ ಮಹಾತ್ಮ ಬಸವಣ್ಣ ಜನಿವಾರ ಸಂಸ್ಕೃತಿಯನ್ನು ಕಿತ್ತೊಗೆದು ಮಾನವ ಧರ್ಮದ ಸಂಸ್ಕೃತಿಯನ್ನು ಕಟ್ಟಲು ಅವಿರತವಾಗಿ ಶ್ರಮಿಸಿದರು. ವರ್ಣಾಶ್ರಮ ಪದ್ಧತಿಯಲ್ಲಿರುವ ಜಾತಿ, ಧರ್ಮ, ರೂಢಿ, ಸಂಪ್ರದಾಯವನ್ನು ವಿರೋಧಿಸುವ ಮೂಲಕ ಸಾಂಪ್ರದಾಯಿಕತೆಯನ್ನು ಅಲ್ಲಗಳೆದರು.

ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 11, Iss 05, 2022

ುದ್ಧ
ಹೋರಾಟಕ್ಕಿಂತ ವರ್ಣಾಶ್ರಮ ಪದ್ಧತಿ ವಿರುದ್ಧ ಹೋರಾಟವೇ ಇಲ್ಲಿ ಬಹುಮುಖ್ಯವಾಗಿದೆ. ಬಿಜ್ಜಳನಂತ ಅನೇಕ ರಾಜರು ಶತಶತಮಾನಗಳಿಂದ ಬಂದ ವರ್ಣಾಶ್ರಮ ಪದ್ಧತಿಯ ಕಪಿಮುಷ್ಠಿಯಲ್ಲಿ ಸಿಕ್ಕಾಕಿಕೊಂಡಿದ್ದಾರೆ. ಅದರಾಚೆ ಬರಲು ಎಷ್ಟೇ ಪ್ರಯತ್ನ ಪಟ್ಟರು ಸಾಧ್ಯವಾಗಲಿಲ್ಲ. ಹೀಗಾಗಿ ಬಿಜ್ಜಳನಂತಹ ಅರಸರ ವಿರುದ್ಧ ಹೋರಾಡಿ ತೆಗೆದು ಹಾಕಿದರೆ ಮತ್ತೊಬ್ಬ ಬಿಜ್ಜಳನಂತಹ ಅರಸ ಬರುತ್ತಾನೆಂದು ತಿಳಿದುಕೊಂಡ ಶರಣರ ನಾಯಕ ಬಸವಣ್ಣ ಮತ್ತು ವಚನಕಾರರು ನೇರವಾಗಿ ಅರಸನ ವಿರುದ್ಧ ಪ್ರತಿಭಟಿಸದೆ ವೈದಿಕಶಾಹಿ ವಿರುದ್ಧ ಅಸಮಾನತೆಗೆ ಕಾರಣವಾದ ವರ್ಣಾಶ್ರಮದ ವಿರುದ್ಧ ಬಂಡಾಯವೆದಿದ್ದು.

ವಚನ ಸಾಹಿತ್ಯ ಹನ್ನೆರಡನೆ ಶತಮಾನದಲ್ಲಿ ಕರ್ನಾಟಕದಲ್ಲಿ ನಡೆದ ಬಹುದೊಡ್ಡ ಸಾಂಸ್ಕೃತಿಕ, ಸಾಹಿತಿಕ ಸಂಪತ್ತಿನ ಖಣಜ. ಬಾಯಿ ಇದ್ದು ಮೂಕರಾದ, ಕಣ್ಣಿದ್ದು ಕುರುಡರಾದ, ಬಲವಿದ್ದು ಬಲಹೀನರಾದ ಜನಸಾಮಾನ್ಯರ ಧ್ವನಿಯಾಗಿ ಬಡವರ ಬದುಕಿನ ಬೆಳಕಾಗಿ ಮೂಡಿಬಂದಿದೆ. ಜೊತೆಗೆ ಅಭಿವ್ಯಕ್ತಿ ಸ್ವಾತಂತ್ರ್ಯ, ವಾಕ್‌ಸ್ವಾತಂತ್ರ್ಯ ದೊರಕಿಸಿಕೊಟ್ಟಂತಕಾಲ. ಸಮಾಜದಲ್ಲಿರುವ ವರ್ಣಾಶ್ರಮ ಪದ್ಧತಿಯನ್ನು ನಾಶಗೊಳಿಸಿ ಸಮಸ್ಥಿತಿಯನ್ನು ಸಮಾಜದಲ್ಲಿ ತರಲು ಹೋರಾಡಿದಂತವರು ಬಸವಣ್ಣ ಮತ್ತು ವಚನಕಾರರು. ಈ ಕಾರಣಕ್ಕಾಗಿ ಕೈಕೊಂಡ ಅವರ ಜನಪರ ಆಂದೋಲನ ನಮ್ಮ ರಾಷ್ಟ್ರದ ಇತಿಹಾಸದಲ್ಲಿಯೇ ಒಂದು ಮರೆಯಲಾಗದ ವಿಶಿಷ್ಟ ಸಂಗತಿ.

ಹನ್ನೆರಡನೆ ಶತಮಾನದಲ್ಲಿ ಬಸವಣ್ಣ, ಮಹಾನ್ ದಾರ್ಶನಿಕನಾಗಿ, ಸಮಾಜ ಸುಧಾರಕನಾಗಿ ವಿಚಾರವಾದಿಯಾಗಿ, ಸಮಾಜದಲ್ಲಿರುವ ವರ್ಣಾಶ್ರಮ ಪದ್ಧತಿ ಮತ್ತು ದಲಿತ ವರ್ಗದ ಶೋಷಣೆ ವಿರುದ್ಧ ಪ್ರತಿನಾಯಕನಾಗಿ ನಿಂತ ದೃಷ್ಟಾರ. ಸಮಾಜದ ಅಂಕು–ಡೊಂಕನ್ನು ತಮ್ಮ ವಚನಗಳ ಮೂಲಕ ನಿರೂಪಿಸಿದ ನೇತಾರ–ಪುರುಷ ಬಸವಣ್ಣನವರ ಕೆಲವು ವಚನಗಳಲ್ಲಿ ದಲಿತ ಪ್ರಜ್ಞೆ ಹೇಗೆ ಮೂಡಿ ಬಂದಿದೆವೆಂಬುದನ್ನು ಗಮನಿಸಲಾಯಿತು.

~~~~****~~~
~~~~